# ಕರ್ನಾಟಕ ಲೋಕ ಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560 001.

ಸಂಖ್ಯೆ: ಪಿಎಸ್‌ಸಿ 1 ಆರ್‌ಟಿಬಿ–1/2014 ದಿನಾಂಕ: 25–08–2014

## ಪರಿಷ್ಕೃತ ಅಧಿಸೂಚನೆ

ಕೃಷ್ಣ ಮೇಲ್ದಂಡೆ ಯೋಜನೆಯ ಅನುಷ್ಠಾನಕ್ಕಾಗಿ 1993 ಮತ್ತು 1998 ರಲ್ಲಿ ಸಕ್ರಮಗೊಂಡ ಸಹಾಯಕ / ಕಿರಿಯ ಇಂಜಿನಿಯರ್‌ಗಳ ನೇಮಕಾತಿಯ ಸಕ್ರಮವನ್ನು ಮಾನ್ಯ ಉಚ್ಚ ನ್ಯಾಯಾಲಯವು ರದ್ದುಗೊಳಿಸಿ 417 ಹುದ್ದೆಗಳಿಗೆ ಹೊಸ ನೇಮಕಾತಿಯನ್ನು ಮಾಡುವಂತೆ ಆದೇಶಿಸಲಾಗಿದ್ದು, ಈ ಕುರಿತು ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ S.L.P. ಸಂಖ್ಯೆ 38345–38397/2012 ರಲ್ಲಿ ದಾಖಲು ಮಾಡಿದ್ದು ಸದರಿ S.L.P. ವಜಾಗೊಂಡಿರುವುದರಿಂದ ಕರ್ನಾಟಕ ಸಿವಿಲ್ ಸೇವೆಗಳು (ಜಲಸಂಪನ್ಮೂಲ ಸೇವೆ) (ಸಹಾಯಕ ಇಂಜಿನಿಯರುಗಳ ಮತ್ತು ಕಿರಿಯ ಇಂಜಿನಿಯರುಗಳ ವಿಶೇಷ ನೇಮಕಾತಿ) ವಿಧೇಯಕ 2013 ರಂತೆ ಜಲ ಸಂಪನ್ಮೂಲ ಇಲಾಖೆಯಲ್ಲಿ 365 ಸಹಾಯಕ ಇಂಜಿನಿಯರ್(ಸಿವಿಲ್); 40 ಸಹಾಯಕ ಇಂಜಿನಿಯರ್ (ಮೆಕ್ಯಾನಿಕಲ್); 131 ಕಿರಿಯ ಇಂಜಿನಿಯರ್ (ಸಿವಿಲ್) ಮತ್ತು 14 ಕಿರಿಯ ಇಂಜಿನಿಯರ್ (ಮೆಕ್ಯಾನಿಕಲ್) ಹುದ್ದೆಗಳ ನೇರ ನೇಮಕಾತಿಗಾಗಿ ಸದರಿ ನಿಯಮಗಳನುಸಾರ ದಿನಾಂಕ 11–2–1999 ರಂದು ಎಲ್ಲಾ ಅರ್ಹತೆಗಳನ್ನು, ಅಂದರೆ ವಯೋಮಿತಿ, ವಿದ್ಯಾರ್ಹತೆ ಮತ್ತು ಮೀಸಲಾತಿ ಹೊಂದಿರುವ ಅಭ್ಯರ್ಥಿಗಳಿಂದ ಹಾಗೂ ಸರ್ವೋಚ್ಚ ನ್ಯಾಯಾಲಯದ SLP(Civil) CC 21576/2012 ರಲ್ಲಿನ ದಿನಾಂಕ: 14/12/2012 ಆದೇಶ ಕೆಳಕಂಡಂತಿದ್ದು **"any person who has been working on adhoc basis and was eligible at the initial time of his appointment, can apply in pursuance of any advertisement made even if he has become overaged"** ಈ ಆದೇಶ ಅನ್ವಯವಾಗುವ ಅಭ್ಯರ್ಥಿಗಳಿಂದಲೂ ಆಯೋಗವು ದಿನಾಂಕ 26–08–2014 ರಿಂದ ON LINE ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ಸೂಚನೆ: ಆಯೋಗದ ದಿನಾಂಕ 03–03–2014 ರ ಅಧಿಸೂಚನೆಗೆ ಅನುಗುಣವಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಮತ್ತೆ ಅರ್ಜಿ ಸಲ್ಲಿಸಬೇಕು. ಆದರೆ, ಶುಲ್ಕವನ್ನು ಪಾವತಿಸುವಂತಿಲ್ಲ.

ಟಿಪ್ಪಣಿ: ಅಧಿಸೂಚಿಸಲಾದ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು, ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆಯಿಲ್ಲದೇ ತಿರಸ್ಕರಿಸಲಾಗುವುದು.

ಅರ್ಜಿಗಳನ್ನು ಆನ್–ಲೈನ್ (ON-LINE) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

1) ಅಭ್ಯರ್ಥಿಗಳು ಅರ್ಜಿಯನ್ನು On-Line ನಲ್ಲಿ ನೀಡಿರುವ ಸೂಚನೆಗಳನ್ವಯ ಭರ್ತಿ ಮಾಡತಕ್ಕದ್ದು.
2) ಅಭ್ಯರ್ಥಿಗಳು ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ವಿರುದ್ಧ ಆಯೋಗವು ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳುವುದು.

ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು:–

| | |
|---|---|
| **GM-General Merit** | **3B-Category 3B** |
| **C-I-Category I** | **SC-Scheduled Caste** |
| **2A-Category 2A** | **ST-Scheduled Tribe** |
| **2B-Category 2B** | **Ex-MP-Ex-Military Person** |
| **3A-Category 3A** | **PH-Physically Handicapped** |

<u>ವಿಶೇಷ ಸೂಚನೆ:</u>– ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ ಶುಲ್ಕವನ್ನು ಪಾವತಿಸತಕ್ಕದ್ದು.

2. <u>ಶುಲ್ಕ:</u>–

| | |
|---|---|
| ಸಾಮಾನ್ಯ ಅರ್ಹತೆ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ | **₹: 300/–** |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ | **₹: 25/–** |

ಸೂಚನೆ: ಆಯೋಗದ ದಿನಾಂಕ 03–03–2014 ರ ಅಧಿಸೂಚನೆಗೆ ಅನುಗುಣವಾಗಿ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಿದ ಅಭ್ಯರ್ಥಿಗಳು ಈಗ ಶುಲ್ಕ ಪಾವತಿಸುವಂತಿಲ್ಲ ಆದರೆ, ಅರ್ಜಿಯಲ್ಲಿ ಹಿಂದೆ ಶುಲ್ಕ ಪಾವತಿಸಿದ ವಿವರವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು ಹಾಗೂ ಶುಲ್ಕ ಪಾವತಿಸಿದ ಚಲನ್ ಅನ್ನು ಅಪ್ ಲೋಡ್ ಮಾಡಿಕೊಳ್ಳತಕ್ಕದ್ದು. ಶುಲ್ಕ ಪಾವತಿಸಿದ ಬಗ್ಗೆ ವಿವರಗಳನ್ನು ಅಂಚೆ ಕಛೇರಿಯ ಅಂತರ್ಜಾಲ ಸಂಖ್ಯೆ **“ karnataka posts.gov.in ’’** ರಲ್ಲಿ ನೋಡಿಕೊಳ್ಳಬಹುದಾಗಿದೆ.

**2.1** ಕರ್ನಾಟಕ ರಾಜ್ಯದಲ್ಲಿನ ಯಾವುದೇ ಇ–ಪಾವತಿ ಅಂಚೆ ಕಛೇರಿಗಳಲ್ಲಿ ಚಲನ್ ನೀಡಿ ನಿಗದಿತ ವೇಳೆಯೊಳಗೆ ಶುಲ್ಕ ಪಾವತಿಸತಕ್ಕದ್ದು. **ON-LINE** ನಲ್ಲಿ ಅರ್ಜಿ ಸಲ್ಲಿಸಿ ಚಲನ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿದ ಮೊಬಲಗನ್ನು ಅಂಚೆ ಕಛೇರಿಗೆ ನಿಗದಿಪಡಿಸಿದ ಕೊನೆಯ ದಿನಾಂಕ ಹಾಗೂ ನಿಗದಿತ ವೇಳೆಯೊಳಗಾಗಿ ಪಾವತಿಸತಕ್ಕದ್ದು.

ಇದನ್ನು ಹೊರತುಪಡಿಸಿ ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಪಾವತಿಸದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

3. ಅಭ್ಯರ್ಥಿಗಳು **ONLINE** ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು.

<u>ಹಂತ 1:–</u> ಅಭ್ಯರ್ಥಿಗಳು ಆಯೋಗದ ಅಧಿಕೃತ ವೈಬ್‌ಸೈಟ್ **“http://kpsc.kar.nic.in“**ನ್ನು ತೆರೆದ ಕೂಡಲೇ ಕಂಪ್ಯೂಟರ್ ಪರದೆಯ ಮೇಲೆ **‘Application for Special Recruitment to the posts of Assistant Engineer / Junior Engineer in Water Resources Department”** ಎಂದು ಮೂಡುತ್ತದೆ. ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಹುದ್ದೆಗಳ ಅಧಿಸೂಚನೆಯನ್ನು ಮತ್ತು ಸೂಚನೆಗಳನ್ನು ಕಡ್ಡಾಯವಾಗಿ ಓದತಕ್ಕದ್ದು ಮತ್ತು ಅಂತಿಮವಾಗಿ ನಿಯಮ ಮತ್ತು ಷರತ್ತುಗಳನ್ನು ಕೆಳಗಿನ ಚೆಕ್ ಬಾಕ್ಸ್ ಅನ್ನು ಒತ್ತುವ ಮೂಲಕ ಒಪ್ಪಿಕೊಳ್ಳತಕ್ಕದ್ದು ಮತ್ತು **Open Application Button** ಅನ್ನು **Press** ಮಾಡಿ ಮುಂದುವರೆಯಬೇಕು.

<u>ಹಂತ 2:–</u> ಸಂಬಂಧಪಟ್ಟ ಹುದ್ದೆಯನ್ನು ಆಯ್ಕೆ ಮಾಡಿ **Apply Button** ಅನ್ನು ಒತ್ತಿ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು. ಅರ್ಜಿಯನ್ನು ಭರ್ತಿ ಮಾಡಿದ ನಂತರ ನಮೂದಿಸಿದ ವಿವರಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಿಕೊಂಡು ಎಲ್ಲಾ ವಿವರಗಳು ಸರಿಯಾಗಿರುತ್ತವೆ ಎಂದು ಖಚಿತಪಡಿಸಿಕೊಂಡ ನಂತರ **Preview Button** ಅನ್ನು ಒತ್ತಿ ಮುಂದುವರೆಯಬೇಕು.


<u>ಹಂತ 3:–</u> ನಿಮ್ಮ ಅರ್ಜಿಯ ಯಾವುದೇ ವಿವರಗಳ ಬದಲಾವಣೆ ಅಗತ್ಯವಿದ್ದರೆ ಪೂರ್ವ ದರ್ಶನದ ಪುಟದಲ್ಲಿ **Edit Button** ಅನ್ನು ಒತ್ತಿ ನಿಮ್ಮ ಅರ್ಜಿಯಲ್ಲಿನ ವಿವರಗಳು ಸರಿ ಇರುವುದನ್ನು ಖಚಿತಪಡಿಸಿಕೊಂಡು ನೀವು ಸ್ಕ್ಯಾನ್ ಮಾಡಿಟ್ಟುಕೊಂಡಿರುವ ಭಾವಚಿತ್ರ **(Photo)** ಹಾಗೂ ಸಹಿಯನ್ನು **upload** ಮಾಡಲು **Next Button** ಅನ್ನು ಒತ್ತಿ.

**<u>Note:</u>**- ಈ ಹಂತದಲ್ಲಿ ಪರದೆಯ ಮೇಲೆ ಮೂಡಲಾದ ಅಭ್ಯರ್ಥಿಯ **Application ID** ಮತ್ತು **Password** ಅನ್ನು ತಪ್ಪದೇ ಬರೆದಿಟ್ಟುಕೊಳ್ಳತಕ್ಕದ್ದು. ಅಭ್ಯರ್ಥಿಯು **Edit Application Button** ಅನ್ನು ಒತ್ತಿ ಅವರ **Application ID** ಮತ್ತು **Password** ಅನ್ನು ಬಳಿಸಿ ತಮ್ಮ ವಿವರಗಳನ್ನು ಅಪ್‌ಲೋಡ್ ಮಾಡಬಹುದು ಅಥವಾ ಅಪ್‌ಲೋಡ್ ಮಾಡಿದ ಮಾಹಿತಿಯನ್ನು ಬದಲಾಯಿಸಬಹುದು.

<u>ಹಂತ 4:–</u> ನೀವು ಸ್ಕ್ಯಾನ್ ಮಾಡಿಟ್ಟುಕೊಂಡಿರುವ ಭಾವಚಿತ್ರ ಮತ್ತು ಸಹಿಯನ್ನು ಆಯ್ಕೆ ಮಾಡುವ ಬಗ್ಗೆ **Browse Button** ಅನ್ನು ಒತ್ತಿ ಮತ್ತು ನಿಮ್ಮ ಭಾವಚಿತ್ರ ಮತ್ತು ಸಹಿಯನ್ನು ಪೂರ್ವದರ್ಶನ ಮಾಡಲು **Upload Button** ಅನ್ನು ಒತ್ತಿ. ಪೂರ್ವ ದರ್ಶನ ಮಾಡಲು **Upload Button** ಅನ್ನು ಒತ್ತಿ, ಒಂದು ವೇಳೆ ತಪ್ಪಾದ ಭಾವಚಿತ್ರ / ಸಹಿಯನ್ನು ಅಪ್ ಲೋಡ್ ಮಾಡಿದ್ದಲ್ಲಿ ಮೇಲಿನ ಕ್ರಮವನ್ನು ಪುನರಾವರ್ತಿಸಿ ಅಥವಾ ಮುಂದಿನ ಪುಟದ ಬಗ್ಗೆ **Next Button** ಒತ್ತಿ. ಅಭ್ಯರ್ಥಿಯು ಈ ಹಂತದಲ್ಲಿ **Next Button** ಅನ್ನು ಒತ್ತಿದರೆ ತಮ್ಮ ಅರ್ಜಿಯಲ್ಲಿನ ಯಾವುದೇ ವಿವರಗಳನ್ನು ಬದಲಾಯಿಸಲು ಸಾಧ್ಯವಿರುವುದಿಲ್ಲ.

ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಭ್ಯರ್ಥಿಯು ಮೊದಲು ತನ್ನ ಇತ್ತೀಚಿನ ಭಾವಚಿತ್ರವನ್ನು ಖಾಲಿ ಬಿಳಿ ಕಾಗದದ ಮೇಲೆ ಇರಿಸಿ ಸ್ಕ್ಯಾನ್ ಮಾಡಿಟ್ಟುಕೊಳ್ಳಬೇಕು, ತದನಂತರ ಕಪ್ಪು ನಕ್ಷೆ / ಮಾರ್ಕರ್ ಪೆನ್ನಿನಿಂದ ಖಾಲಿ ಬಿಳಿ ಕಾಗದದ ಮೇಲೆ ತನ್ನ ಸಹಿಯನ್ನು ಮಾಡಿ ಸ್ಕ್ಯಾನ್ ಮಾಡಿಟ್ಟುಕೊಳ್ಳಬೇಕು, ನೀವು ಸ್ಕ್ಯಾನ್ ಮಾಡಿಟ್ಟುಕೊಂಡಿರುವ ಭಾವಚಿತ್ರ ಹಾಗೂ ಸಹಿ ಈ ಕೆಳಗಿನ ಅಂಕಣದೊಳಗೆ ಇರುವುದನ್ನು ಖಚಿತಪಡಿಸಿಕೊಳ್ಳಿ.

| File Size < 100 kb | |
|---|---|
| DPI Setting = 100 dpi | Image Scale = 100% |
| Color = True Color | Type = JPEG/JPG |




**Note :-** ಅಭ್ಯರ್ಥಿಯು **Photo & Sign Upload Button** ಅನ್ನು ಒತ್ತಿ, ಅವರ **Application Id** ಮತ್ತು **Password** ಅನ್ನು ಬಳಸಿ ತಮ್ಮ ಭಾವಚಿತ್ರ ಹಾಗೂ ಸಹಿಯನ್ನು ಅಪ್‌ಲೋಡ್ ಮಾಡಬಹುದು ಅಥವಾ ತಪ್ಪಾದಲ್ಲಿ ಅದನ್ನು ಬದಲಾಯಿಸಬಹುದು. ಒಂದು ವೇಳೆ ಅಭ್ಯರ್ಥಿಯು ತಮ್ಮ ಭಾವಚಿತ್ರ ಹಾಗೂ ಸಹಿಯನ್ನು ಅಪ್‌ಲೋಡ್ ಮಾಡದಿದ್ದರೆ ಅವರ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

<u>ಹಂತ 5:–</u> ಅರ್ಜಿಯ ಮುದ್ರಣವನ್ನು ಪಡೆಯಲು **Print Application Button** ಅನ್ನು ಒತ್ತಿ, ಅನಂತರವೇ **Application Preview** ಮೂಡಲಿದ್ದು, ಅಭ್ಯರ್ಥಿಗಳು ಅರ್ಜಿಯ ಪ್ರತಿಯನ್ನು ಕಡ್ಡಾಯವಾಗಿ **Download** ಮಾಡಿಕೊಳ್ಳತಕ್ಕದ್ದು. ಆಯೋಗವು ಅಪೇಕ್ಷಿಸಿದಾಗ ಈ ಪ್ರತಿಯನ್ನು ಹಾಜರುಪಡಿಸಬೇಕು.

ಹಂತ 6:- ನಂತರ ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕೆ **Post Office Challan Button** ಅನ್ನು ಒತ್ತಿ **challan** ಪ್ರತಿಯನ್ನು **Download** ಮಾಡಿಕೊಂಡು ಕರ್ನಾಟಕ ರಾಜ್ಯದಲ್ಲಿನ ಯಾವುದೇ ಇ-ಪಾವತಿ ಅಂಚೆ ಕಛೇರಿಗೆ ಹೋಗಿ, ನಿಗದಿತ ಅರ್ಜಿ ಶುಲ್ಕವನ್ನು ಪಾವತಿ ಮಾಡಿ. ಅಂತಿಮವಾಗಿ ಪೋಸ್ಟ್ ಆಫೀಸ್ ಸ್ಟಿಕ್ಕರ್ ಅನ್ನು ನಿಮ್ಮ **challan** ಪ್ರತಿಯ ಮೇಲೆ ಅಂಟಿಸುವುದರಿಂದ ನಿಮ್ಮ ಶುಲ್ಕ ಪಾವತಿಯನ್ನು ದೃಢಪಡಿಸಲಾಗುತ್ತದೆ.

**Note** :- ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ **25-09-2014** ರ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

**3.1** ಅಭ್ಯರ್ಥಿಗಳು ತಮ್ಮ ಅರ್ಜಿಯ ಸ್ಥಿತಿಯನ್ನು ತಿಳಿಯಬೇಕಾದಲ್ಲಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ 15 ದಿನಗಳ ತರುವಾಯ, ಆಯೋಗದ ವೆಬ್‌ಸೈಟ್‌ನ **Check Status** ಲಿಂಕಿನಲ್ಲಿ ಮಾಹಿತಿಗಳನ್ನು ದಾಖಲಿಸಿ, ಅರ್ಜಿಯು ಸಿಂಧುವಾಗಿರುವ ಬಗ್ಗೆ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ತಮ್ಮ ಅರ್ಜಿಯ ಮಾಹಿತಿ ಆಯೋಗದ ವೆಬ್‌ಸೈಟ್‌ನಲ್ಲಿ ದೊರೆಯದಿದ್ದಲ್ಲಿ ನೀವು ಪಾವತಿಸಿರುವ ಶುಲ್ಕದ ವಿವರವುಳ್ಳ ಚಲನ್ ಪ್ರತಿಯೊಂದಿಗೆ ಆಯೋಗವನ್ನು ಸಂಪರ್ಕಿಸಬಹುದು.

**3.2** **ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.**

*** ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 26-08-2014.**

*** ಶುಲ್ಕವನ್ನು ಪಾವತಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25-09-2014.**
**(ಆನ್ ಲೈನ್ ಅರ್ಜಿ ಸಲ್ಲಿಸಲು ಮದ್ಯಾಹ್ನ 01-00 ಘಂಟೆ ಹಾಗೂ ಶುಲ್ಕ ಪಾವತಿಸಲು ಮದ್ಯಾಹ್ನ 03-00 ಘಂಟೆಗೆ)**

**ವಿಶೇಷ ಸೂಚನೆ:**

* ಅಭ್ಯರ್ಥಿಗಳು ಅಂಚೆ ಕಛೇರಿಯ ಕಾರ್ಯದ ವೇಳೆಗಳನ್ನು ಮುಂಚಿತವಾಗಿ ತಿಳಿದುಕೊಂಡು , ಶುಲ್ಕವನ್ನು ನಿಗದಿತ ಕೊನೆಯ ದಿನಾಂಕ ಹಾಗೂ ವೇಳೆಯೊಳಗೆ ಪಾವತಿಸತಕ್ಕದ್ದು. ಈ ಸೂಚನೆಯನ್ನು ಪಾಲಿಸದೇ ಉದ್ಭವವಾಗುವ ಅನಾನುಕೂಲತೆಗಳಿಗೆ ಆಯೋಗವು ಜವಾಬ್ದಾರಿಯಾಗಿರುವುದಿಲ್ಲ.

* **On-line** ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (**Help line**) **9901294490** ಮತ್ತು **9632320751** ಅನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.

**ಅರ್ಹತಾ ಷರತ್ತುಗಳು:-**

ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

ಆ) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

ಇ) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರ್ಕಾರವು ಕಾದಿರಿಸಿಕೊಂಡಿದೆ ಮತ್ತು ಸರ್ಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

**4. ನೇಮಕಾತಿ ವಿಧಾನ:– ಕೇವಲ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಪಡೆದ ಒಟ್ಟು ಶೇಕಡವಾರು ಅಂಕಗಳ ಜೇಷ್ಟತೆಯ ಮೂಲಕ ನೇಮಕಾತಿ**

1. ಕರ್ನಾಟಕ ಸಿವಿಲ್ ಸೇವೆಗಳು (ಜಲ ಸಂಪನ್ಮೂಲ ಸೇವೆಗಳು) (ಸಹಾಯಕ ಇಂಜಿನಿಯರುಗಳ ಮತ್ತು ಕಿರಿಯ ಇಂಜಿನಿಯರುಗಳ ವಿಶೇಷ ನೇಮಕಾತಿ) ವಿಧೇಯಕ 2013 ರಂತೆ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಶೇಕಡಾವಾರಿನ ಆಧಾರದ ಮೇಲೆ ಮತ್ತು ಈ ಅಧಿನಿಯಮದ ಮೇರೆಗೆ ಅನುಮತಿಸಲಾದ ಕೃಪಾಂಕವನ್ನು ಪರಿಗಣನೆಗೆ ತೆಗೆದುಕೊಂಡು, ಮತ್ತು ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಹಾಗೂ ಇತರೆ ಹಿಂದುಳಿದ ವರ್ಗಗಳಿಗಾಗಿ ಮೀಸಲಾತಿಯನ್ನು ಒದಗಿಸುವ ಜಾರಿಯಲ್ಲಿರುವ ಆದೇಶಗಳಿಗೆ ಅಥವಾ ಜಾರಿಯಲ್ಲಿರುವ ಕಾನೂನಿನ ಪ್ರಕಾರ ಯಾವುದೇ ಇತರೆ ಮೀಸಲಾತಿಗೆ ಒಳಪಟ್ಟು ಅರ್ಹತಾ ಪಟ್ಟಿಯನ್ನು ಮೆರಿಟ್ ಅನುಸಾರವಾಗಿ ತಯಾರಿಸಲಾಗುವುದು.

ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಒಟ್ಟು ಶೇಕಡವಾರು ಅಂಕಗಳ ಮೆರಿಟ್ ಆಧಾರದ ಮೇಲೆ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿರುವುದರಿಂದ ಅಭ್ಯರ್ಥಿಗಳು ಅರ್ಜಿಯಲ್ಲಿ ಎಲ್ಲಾ ವರ್ಷಗಳ / ಸೆಮಿಸ್ಟರ್‌ಗಳಲ್ಲಿ ಗಳಿಸಿರುವ / ಗರಿಷ್ಠ ಅಂಕಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

**ಕೃಪಾಂಕ**

(ಅ) ಅಭ್ಯರ್ಥಿಗಳು ರಾಜ್ಯದ ನೀರಾವರಿ ಇಲಾಖೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ **DPAR 31 SRD 2002** ದಿನಾಂಕ **18.10.2002** ರಲ್ಲಿ ಸಕ್ರಮಗೊಂಡು ಸಹಾಯಕ ಇಂಜಿನಿಯರ್ ಅಥವಾ ಕಿರಿಯ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದ್ದರೆ, ಅಂಥ ಅಭ್ಯಥಿಯು ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇಕಡಾವಾರಿಗೆ ಗರಿಷ್ಠ ಶೇಕಡಾ ಮೂವತ್ತಕ್ಕೆ ಒಳಪಟ್ಟು ಪ್ರತೀ ಸೇವಾ ವರ್ಷಕ್ಕೆ ಶೇಕಡಾ ಐದರಷ್ಟು ಕೃಪಾಂಕವನ್ನು ಸೇರಿಸಲಾಗುವುದು. (ಒಂದು ವರ್ಷದ ಭಾಗಶ: ಕಾಲ ಸಲ್ಲಿಸಿದ ಸೇವೆಯನ್ನು ಇಡೀ ವರ್ಷ ಸಲ್ಲಿಸಿದ ಸೇವೆಯೆಂದು ಪರಿಗಣಿಸಲಾಗುವುದು).

ಈ ಕೃಪಾಂಕವನ್ನು ಪಡೆಯಲು ಅರ್ಹರಿರುವ ಅಭ್ಯರ್ಥಿಗಳು ಅಧಿಸೂಚನೆಗೆ ಅನುಬಂಧಿಸಲಾದ ಸೇವಾ ಪ್ರಮಾಣ ಪತ್ರವನ್ನು (ಅನುಬಂಧ–1) ಕಡ್ಡಾಯವಾಗಿ ಸರ್ಕಾರದ ಕಾರ್ಯದರ್ಶಿ ಅಥವಾ ಪ್ರತ್ಯಾಜಿಸಲ್ಪಟ್ಟ ಅಧಿಕಾರಿ, ಜಲ ಸಂಪನ್ಮೂಲ ಇಲಾಖೆ, ಇವರಿಂದ ಪಡೆದು ಅರ್ಜಿಯೊಂದಿಗೆ ಅಪ್ಲೋಡ್ ಮಾಡತಕ್ಕದ್ದು. ತಪ್ಪಿದ್ದಲ್ಲಿ ಕೃಪಾಂಕವನ್ನು ನೀಡಲಾಗುವುದಿಲ್ಲ.

(ಆ) ಸ್ಥಳಾಂತರಿತ ಕುಟುಂಬಗಳಿಗೆ ಸೇರಿದ ಅಭ್ಯರ್ಥಿಗಳ ಸಂದರ್ಭದಲ್ಲಿ, ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಶೇಕಡಾವಾರು ಅಂಕಗಳಿಗೆ ಶೇಕಡಾ ಒಂದರಷ್ಟು ಕೃಪಾಂಕವನ್ನುಸೇರಿಸಲಾಗುವುದು.

ಸಂತ್ರಸ್ಥರ ಕುಟುಂಬದಿಂದ (**Land Losers Category**) 2002–2007ರ ಅವಧಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ವಜಾಗೊಂಡಿರುವ ಅಭಿಯಂತರರುಗಳಿಗೆ ವಿಧೇಯಕದ ಕಲಂ 7(2) (ಎ) ರನ್ವಯ ಕೃಪಾಂಕಕ್ಕೆ ಅರ್ಹರಿದ್ದು, ಈ ಕೃಪಾಂಕವನ್ನು ಪಡೆಯಲು ಅರ್ಹರಿರುವ ಅಭ್ಯರ್ಥಿಗಳು ಅಧಿಸೂಚನೆಗೆ ಅನುಬಂಧಿಸಲಾದ (ಅನುಬಂಧ–2)ಸೇವಾ ಪ್ರಮಾಣ ಪತ್ರವನ್ನು ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರಿಂದ ಹಾಗೂ ಸ್ಥಳಾಂತರ ಕುಟುಂಬಕ್ಕೆ ಸಂಬಂಧಿಸಿದಂತೆ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಯಿಂದ ಪಡೆದು(ದಿನಾಂಕ **11–02–1999** ರಂದು ಸ್ಥಳಾಂತರ ಕುಟುಂಬಕ್ಕೆ ಸಂಬಂಧಿಸಿದಂತೆ ಪ್ರಮಾಣ ಪತ್ರವು ಅಭ್ಯರ್ಥಿಗಳು ಪಡೆದಿದ್ದರೇ ಅದೇ ಮೂಲ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದು) ಈ ಎರಡು ಪ್ರಮಾಣ ಪತ್ರಗಳನ್ನು ಅಪ್‌ಲೋಡ್ ಮಾಡತಕ್ಕದ್ದು. ತಪ್ಪಿದ್ದಲ್ಲಿ ಕೃಪಾಂಕವನ್ನು ನೀಡಲಾಗುವುದಿಲ್ಲ.

ವಿವರಣೆ: ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ಸ್ಥಳಾಂತರ ಕುಟುಂಬ ಎಂದರೆ, ನೀರಾವರಿ ಯೋಜನೆಯ ಉದ್ದೇಶಕ್ಕಾಗಿ, ಬಾಧಿತ ವಲಯದಲ್ಲಿ ಗ್ರಾಮ ಠಾಣಾ ಫ್ಲಾಟನ್ನು ಅಥವಾ ಇತರೆ ಸ್ವತ್ತನ್ನೂ ಒಳಗೊಂಡಂತೆ ಅಂಥ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಕಾರಣದಿಂದ ಈ ಭೂಮಿ ಅಥವಾ ಇತರೆ ಸ್ವತ್ತಿನಿಂದ ಸ್ಥಳಾಂತರಿಸಿಲಾಗಿರುವ ಯಾರೇ ವ್ಯಕ್ತಿ, ಗಂಡ ಅಥವಾ ಸಂದರ್ಭಾನುಸಾರ ಹೆಂಡತಿ, ಅಥವಾ ಅಂಥ ವ್ಯಕ್ತಿ ಹಾಗೂ ಅವರೊಂದಿಗೆ ವಾಸಿಸುವ ಹಾಗೂ ಅವರ ಮೇಲೆ ಅಥವಾ ಜೀವನೋಪಾಯಕ್ಕೆ ಅವರನ್ನು ಅವಲಂಬಿಸಿದ ಅವರ ಮಗ ಹಾಗೂ

ಅವಿವಾಹಿತ ಮಗಳು ಹಾಗೂ ಹಿಡುವಳಿದಾರನಾಗಿರುವಂತಹ ಗೇಣಿದಾರನಾಗಿರುವಂತಹ ವ್ಯಕ್ತಿ, ಸರ್ಕಾರಿ ಗೇಣಿದಾರ ಅಥವಾ ಸ್ವತ್ತಿನ ಮಾಲಿಕ.

ಸ್ಥಳಾಂತರ ಕುಟುಂಬಕ್ಕೆ ಸಂಬಂಧಿಸಿದಂತೆ ವಿಧೇಯಕದ ಕಲಂ 7(2)(ಬಿ) ರನ್ವಯ ಕೃಪಾಂಕ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಯಿಂದ ಪಡೆದು ಇದನ್ನು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡತಕ್ಕದ್ದು. ತಪ್ಪಿದ್ದಲ್ಲಿ ಕೃಪಾಂಕವನ್ನು ನೀಡಲಾಗುವುದಿಲ್ಲ.

5. ಶೈಕ್ಷಣಿಕ ವಿದ್ಯಾರ್ಹತೆ, ವೇತನ ಶ್ರೇಣಿ, ವಯೋಮಿತಿ ಮತ್ತು ಹುದ್ದೆಗಳ ವರ್ಗೀಕರಣ:–

**5.1** ಶೈಕ್ಷಣಿಕ ವಿದ್ಯಾರ್ಹತೆ:– ಸಹಾಯಕ ಇಂಜಿನಿಯರುಗಳು ಮತ್ತು ಕಿರಿಯ ಇಂಜಿನಿಯರುಗಳ ಹುದ್ದೆಗೆ **11–02–1999** ರಂದು ಇದ್ದಂತೆ ಕರ್ನಾಟಕ ಲೋಕೋಪಯೋಗಿ (ನೀರಾವರಿ ಸೇವೆ) (ನೇಮಕಾತಿ) ನಿಯಮಗಳು **1998** ರಲ್ಲಿ ನಿರ್ದಿಷ್ಟಪಡಿಸಲಾದ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು. ದಿನಾಂಕ **11–02–1999** ರಂದು ಇದ್ದಂತೆ ಈ ಕೆಳಕಂಡ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಸಹಾಯಕ ಇಂಜಿನಿಯರುಗಳ ಸಿವಿಲ್ / ಮೆಕ್ಯಾನಿಕಲ್ ವಿದ್ಯಾರ್ಹತೆ:–

**Must be holder of a degree in Civil or Mechanical Engineering depending upon the requirement as the case may be or must be holder of a Diploma Certificate from a recognised Institute of Engineers regarding pass in Parts-A & B of the A.M.I.E. or possess equivalent qualification.**

ಕಿರಿಯ ಸಹಾಯಕ ಇಂಜಿನಿಯರುಗಳ ಸಿವಿಲ್ / ಮೆಕ್ಯಾನಿಕಲ್ ವಿದ್ಯಾರ್ಹತೆ:–

**Must be holder of a Diploma in Civil or Mechanical Engineering depending upon requirement as the case may be from a recognised Polytechnic in Karnataka or possess equivalent qualification.**

**5.2** ವೇತನ ಶ್ರೇಣಿ:–

ಸಹಾಯಕ ಇಂಜಿನಿಯರುಗಳ ಸಿವಿಲ್ / ಮೆಕ್ಯಾನಿಕಲ್ **₹: 22800–43200**

ಕಿರಿಯ ಇಂಜಿನಿಯರುಗಳ ಸಿವಿಲ್ / ಮೆಕ್ಯಾನಿಕಲ್ **₹: 17650–32000**

5.3 ವಯೋಮಿತಿ:– ದಿನಾಂಕ **11–02–1999** ರಂತೆ ಅಭ್ಯರ್ಥಿಗಳು ಕನಿಷ್ಠ ವಯೋಮಿತಿಯನ್ನು ಹೊಂದಿರಬೇಕು ಹಾಗೂ ನಿಗದಿತ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

ಕನಿಷ್ಠ – **18** ವರ್ಷಗಳು
ಗರಿಷ್ಠ – **33** ವರ್ಷಗಳು – ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ
**36** ವರ್ಷಗಳು – ಪ್ರವರ್ಗ–2ಎ/2ಬಿ/3ಎ/3ಬಿ ಅಭ್ಯರ್ಥಿಗಳಿಗೆ
**38** ವರ್ಷಗಳು – ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1 ಅಭ್ಯರ್ಥಿಗಳಿಗೆ

.

ಸೂಚನೆ: ನಿಯಮಾನುಸಾರ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ವಯೋಮಿತಿ ಸಡಿಲಿಕೆ ನೀಡಲಾಗುವುದು.

**5.4 ಹುದ್ದೆಗಳ ವರ್ಗೀಕರಣ (1999 ರಲ್ಲಿ ಚಾಲ್ತಿ ಇದ್ದ ಮೀಸಲಾತಿ ನಿಯಮಗಳನ್ವಯ):–**

**ಸಹಾಯಕ ಇಂಜಿನಿಯರ್(ಸಿವಿಲ್) 365 ಹುದ್ದೆಗಳು**

| ಮೀಸಲಾತಿ | ಇತರೆ | ಮಹಿಳೆ | ಮಾ.ಸೈ | ಒಟ್ಟು |
|---|---|---|---|---|
| ಪ.ಜಾ | 33 | 17 | 05 | 55 |
| ಪ.ಪಂ | 06 | 04 | 01 | 11 |
| ಪ್ರ.1 | 08 | 05 | 01 | 14 |
| ಪ್ರ.2(ಎ) | 33 | 17 | 05 | 55 |
| ಪ್ರ.2(ಬಿ) | 09 | 05 | 01 | 15 |
| ಪ್ರ.3(ಎ) | 09 | 05 | 01 | 15 |
| ಪ್ರ.3(ಬಿ) | 11 | 06 | 01 | 18 |
| ಸಾ.ಅ | 109 | 55 | 18 | 182 |
| ಒಟ್ಟು | 218 | 114 | 33 | 365 |

**ಸಹಾಯಕ ಇಂಜಿನಿಯರ್(ಮೆಕ್ಯಾನಿಕಲ್) – 40 ಹುದ್ದೆಗಳು**

| ಮೀಸಲಾತಿ | ಇತರೆ | ಮಹಿಳೆ | ಮಾ.ಸೈ | ಒಟ್ಟು |
|---|---|---|---|---|
| ಪ.ಜಾ | 03 | 02 | 01 | 06 |
| ಪ.ಪಂ | – | 01 | – | 01 |
| ಪ್ರ.1 | 01 | – | – | 01 |
| ಪ್ರ.2(ಎ) | 04 | 02 | 01 | 07 |
| ಪ್ರ.2(ಬಿ) | 01 | – | – | 01 |
| ಪ್ರ.3(ಎ) | 01 | 01 | – | 02 |
| ಪ್ರ.3(ಬಿ) | 02 | – | – | 02 |
| ಸಾ.ಅ | 12 | 06 | 02 | 20 |
| ಒಟ್ಟು | 24 | 12 | 04 | 40 |

**ಕಿರಿಯ ಇಂಜಿನಿಯರ್(ಸಿವಿಲ್) 131 ಹುದ್ದೆಗಳು**

| ಮೀಸಲಾತಿ | ಇತರೆ | ಮಹಿಳೆ | ಮಾ.ಸೈ | ಅಂಗವಿಕಲ | ಒಟ್ಟು |
|---|---|---|---|---|---|
| ಪ.ಜಾ | 10 | 06 | 02 | 01 | 19 |
| ಪ.ಪಂ | 02 | 02 | – | – | 04 |
| ಪ್ರ.1 | 03 | 01 | 01 | – | 05 |
| ಪ್ರ.2(ಎ) | 10 | 06 | 02 | 01 | 19 |
| ಪ್ರ.2(ಬಿ) | 03 | 01 | 01 | – | 05 |
| ಪ್ರ.3(ಎ) | 03 | 02 | 01 | – | 06 |
| ಪ್ರ.3(ಬಿ) | 03 | 02 | 01 | 01 | 07 |
| ಸಾ.ಅ | 37 | 19 | 07 | 03 | 66 |
| ಒಟ್ಟು | 71 | 39 | 15 | 06 | 131 |

**ಕಿರಿಯ ಇಂಜಿನಿಯರ್(ಮೆಕ್ಯಾನಿಕಲ್) 14 ಹುದ್ದೆಗಳು**

| ಮೀಸಲಾತಿ | ಇತರೆ | ಮಹಿಳೆ | ಮಾ.ಸೈ | ಅಂಗವಿಕಲ | ಒಟ್ಟು |
|---|---|---|---|---|---|
| ಪ.ಜಾ | 02 | – | – | – | 02 |
| ಪ್ರ.1 | 01 | – | – | – | 01 |
| ಪ್ರ.2(ಎ) | 02 | – | – | – | 02 |
| ಪ್ರ.2(ಬಿ) | 01 | – | – | – | 01 |
| ಪ್ರ.3(ಬಿ) | 01 | – | – | – | 01 |
| ಸಾ.ಅ | 03 | 02 | 01 | 01 | 07 |
| ಒಟ್ಟು | 10 | 02 | 01 | 01 | 14 |

ಟಿಪ್ಪಣಿ: ಮೇಲೆ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

ಮಹಿಳೆಯರಿಗೆ / ಮಾಜಿ ಸೈನಿಕಕ ಅಭ್ಯರ್ಥಿಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.
ಸಂಕ್ಷೇಪ:– ಇ – ಇತರೆ / ಮ – ಮಹಿಳೆ / ಮಾ.ಸೈ – ಮಾಜಿ ಸೈನಿಕ / ಪ.ಜಾ – ಪರಿಶಿಷ್ಟ ಜಾತಿ / ಪ.ಪಂ. – ಪರಿಶಿಷ್ಟ ಪಂಗಡ / ಪ್ರ.–ಪ್ರವರ್ಗ /ಸಾ.ಅ.–ಸಾಮಾನ್ಯ ಅರ್ಹತೆ

6. ಜಾತಿ / ಮೀಸಲಾತಿ ಪ್ರಮಾಣ ಪತ್ರಗಳು :–
ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು:–
ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ
ಆ) ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ
ಇ) ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ

ದಿನಾಂಕ 11–02–1999 ರಂದು ಚಾಲ್ತಿಯಲ್ಲಿದ್ದ ಮೀಸಲಾತಿಗಳಿಗೆ ಸಂಬಂದಿಸಿದ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದು ಮೂಲ ದಾಖಲಾತಿಗಳ ಪರಿಶೀಲನೆಗೆ ಸೂಚಿಸಿದಾಗ ಇದರ ಮೂಲ ಪ್ರತಿಯನ್ನು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಮೀಸಲಾತಿಯನ್ನು ತಿರಸ್ಕರಿಸಿ ಸಾಮಾನ್ಯ ಅರ್ಹತೆಯ ಅಭ್ಯರ್ಥಿಯೆಂದು ಪರಿಗಣಿಸಲಾಗುವುದು. ಈ ಹುದ್ದೆಗಳ ಮೀಸಲಾತಿ ಉದ್ದೇಶಕ್ಕಾಗಿ ಆದಾಯವನ್ನು ನಿರ್ಧರಿಸುವ ಸಂದರ್ಭದಲ್ಲಿ, ತಾತ್ಕಾಲಿಕ ಅಥವಾ ಗುತ್ತಿಗೆ ಆಧಾರದ ಸಹಾಯಕ ಇಂಜಿನಿಯರುಗಳು ಅಥವಾ ಕಿರಿಯ ಇಂಜಿನಿಯರುಗಳ ಸಂಬಳದ ಆದಾಯವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ

7. ಅಂಗವಿಕಲ ಅಭ್ಯರ್ಥಿ

ಸಾಮಾನ್ಯ ನೇಮಕಾತಿ ನಿಯಮಗಳು 1977ರ ನಿಯಮ–9 ರನ್ವಯ ಸಮೂಹ–' ಸಿ ' ಗುಂಪಿನ ಹುದ್ದೆಗಳಿಗೆ ಶೇಕಡ 5 ರಷ್ಟು ಹುದ್ದೆಗಳನ್ನು ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿಡಬೇಕಾಗಿದ್ದು, ಇದರಂತೆ ಕಿರಿಯ ಇಂಜಿನಿಯರ್ ಹುದ್ದೆಗಳಲ್ಲಿ ಅಂಗವಿಕಲರಿಗೆ ಹುದ್ದೆಗಳನ್ನು ಮೀಸಲಿಡಲಾಗಿದೆ. ಈ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಗದಿಪಡಿಸಿದ ನಮೂನೆಯಲ್ಲಿ ದಿನಾಂಕ 11–02–1999 ರಲ್ಲಿ ಇದ್ದಂತೆ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ವೈದ್ಯಕೀಯ ಮಂಡಳಿಯಿಂದ ಪಡೆದಿಟ್ಟುಕೊಂಡು ಮೂಲ ದಾಖಲಾತಿಗಳ ಪರಿಶೀಲನೆಗೆ ಸೂಚಿಸಿದಾಗ ಇದರ ಮೂಲ ಪ್ರತಿಯನ್ನು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಮೀಸಲಾತಿಯನ್ನು ತಿರಸ್ಕರಿಸಿ ಇತರೆ ಅಭ್ಯರ್ಥಿಯೆಂದು ಪರಿಗಣಿಸಲಾಗುವುದು

ಅಯ್ಕೆಗೆ ಅರ್ಹತೆ ಹೊಂದುವ ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲಿಸಲು ಆಯೋಗವು ನಿಗದಿಪಡಿಸುವ ದಿನಾಂಕ ಹಾಗೂ ವೇಳೆಯನ್ನು ಹಾಗೂ ಅರ್ಹತೆ ಹೊಂದಿರುವ ಅಭ್ಯರ್ಥಿಗಳ ಅರ್ಜಿ ಸಂಖ್ಯೆಗಳನ್ನು ಆಯೋಗದ ಅಂತರ್ಜಾಲ '' **http:://kpsc.kar.nic.in** ''ರಲ್ಲಿ ಪ್ರಕಟಿಸಲಾಗುವುದು.

8. <u>ಪ್ರಾಮುಖ್ಯ ಸೂಚನೆಗಳು:–</u>

ಅಭ್ಯರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಒಂದು ಹಾಳೆಯ ಮೇಲಿಟ್ಟು ಅದರ ಕೆಳಗೆ ಕಪ್ಪು ಶಾಹಿಯ ಸ್ಕೆಚ್/ಮಾರ್ಕರ್ ಪೆನ್‌ಲ್ಲಿ ಸಹಿಯನ್ನು ಸ್ಕ್ಯಾನ್ ಮಾಡಿ ಅರ್ಜಿಗೆ **UPLOAD** ಮಾಡಬೇಕು. ಭಾವಚಿತ್ರ ಹಾಗೂ ಸಹಿಯನ್ನು **UPLOAD** ಮಾಡದ ಅರ್ಜಿಗಳು ತಿರಸ್ಕೃತಗೊಳ್ಳುತ್ತದೆ. ಈ ಕೆಳಕಂಡ ಪ್ರಮಾಣ ಪತ್ರಗಳನ್ನು ನಿಗದಿತ ನಮೂನೆಯಲ್ಲಿ **ON LINE** ಮೂಲಕ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಅದೇ ಮೀಸಲಾತಿ ಪ್ರಮಾಣ ಪತ್ರದ / ಇತರೇ ಪ್ರಮಾಣ ಪತ್ರಗಳ ಮೂಲ ಪ್ರತಿಯನ್ನು ಮೂಲ ದಾಖಲಾತಿಯ ಪರಿಶೀಲನೆಗೆ ಅರ್ಹರಾದಾಗ ಆ ಸಮಯದಲ್ಲಿ ಪರಿಶೀಲನೆಗೆ ಹಾಜರುಪಡಿಸಬೇಕು. ದಿನಾಂಕ **11–02–1999** ರಂದು ಯಾವುದಾದರೂ ಕಾರಣಕ್ಕೆ ಜಾತಿ / ಆದಾಯ / ಸ್ಥಳಾಂತರ ಕುಟುಂಬಕ್ಕೆ ಸಂಬಂಧಿಸಿದ ಪ್ರಮಾಣ ಪತ್ರವು ಅಭ್ಯರ್ಥಿಗಳು ಪಡೆದಿದ್ದರೇ ಅದೇ ಮೂಲ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದು. ಇತರೆ ನಮೂನೆಗಳಲ್ಲಿ ಅಥವಾ ಕೊನೆಯ ದಿನಾಂಕದ ನಂತರದ ಪಡೆದ ಯಾವುದೇ ಅರ್ಹತೆ/ವಯೋಮಿತಿ/ಮೀಸಲಾತಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ತಪ್ಪಿದ್ದಲ್ಲಿ ಇವರ ಮೀಸಲಾತಿಯನ್ನು ತಿರಸ್ಕರಿಸಲಾಗುವುದು / ಅಭ್ಯರ್ಥಿತ್ವವನ್ನು ಅನರ್ಹಗೊಳಿಸಲಾಗುವುದು.

1) ಹುದ್ದೆಗೆ ನಿಗದಿಪಡಿಸಿದ ಶುಲ್ಕವನ್ನು ಅಂಚೆ ಕಛೇರಿಯಲ್ಲಿ ಪಾವತಿಸಿದ ಚಲನ್ ಪ್ರತಿ.
2) ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ /ಸೆಮಿಸ್ಟರ್‌ಗಳ ಅಂಕಪಟ್ಟಿಗಳು ಹಾಗೂ ಘಟಿಕೋತ್ಸವದ ಪ್ರಮಾಣ ಪತ್ರಗಳು / ಗ್ರೇಡ್‌ನ್ನು ಶೇಕಡವಾರು ಅಂಕಗಳಿಗೆ ಪರಿವರ್ತಿಸಿದ ಪ್ರಮಾಣ ಪತ್ರ
3) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ /ಶಾಲೆಯ ವರ್ಗಾವಣೆ ಪ್ರಮಾಣ ಪತ್ರ / ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ.
4) ನಿರಾಕ್ಷೇಪಣಾ ಪತ್ರ. (ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳಿಗೆ)
5) ಸೈನಿಕ ಸೇವೆಯಿಂದ ಬಿಡುಗಡೆಯಾದ ಪ್ರಮಾಣ ಪತ್ರ ಮತ್ತು ಪಿಂಚಣಿ / ಗ್ರ್ಯಾಚ್ಯುಟಿ ಪಡೆಯುತ್ತಿರುವ ಪ್ರಮಾಣ ಪತ್ರ / ಮಾಜಿ ಸೈನಿಕ ಅವಲಂಬಿತರಾಗಿದ್ದಲ್ಲಿ, ಮಾಜಿ ಸೈನಿಕರು ಸೇವೆಯಲ್ಲಿರುವಾಗ ಮೃತಪಟ್ಟಿದ್ದಲ್ಲಿ ಅಥವಾ ಖಾಯಂ ಆಗಿ ಗಾಯಗೊಂಡಿರುವ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ)
6) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿಗಳ ಮೀಸಲಾತಿ ಪ್ರಮಾಣ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ (ಮೀಸಲಾತಿ ಕೋರಿದ್ದಲ್ಲಿ)
7) ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
8) ಸರ್ಕಾರದ ಅಧಿಸೂಚನೆ ಸಂಖ್ಯೆ **DPAR 31 SRD 2002** ದಿನಾಂಕ **18.10.2002** ರಲ್ಲಿ ಸಕ್ರಮಗೊಂಡು ಸಹಾಯಕ ಇಂಜಿನಿಯರ್ ಅಥವಾ ಕಿರಿಯ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದ ಅಭ್ಯರ್ಥಿಗಳು ಕೃಪಾಂಕವನ್ನು ಪಡೆಯಲು ಸದರಿ ಸೇವಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ <u>ಸರ್ಕಾರದ ಕಾರ್ಯದರ್ಶಿ ಅಥವಾ ಪ್ರತ್ಯಾಜಿಸಲ್ಪಟ್ಟ ಅಧಿಕಾರಿ, ಜಲ ಸಂಪನ್ಮೂಲ ಇಲಾಖೆ,</u> ಇವರಿಂದ ಪಡೆದು ಅರ್ಜಿಯೊಂದಿಗೆ ಅಪ್ಲೋಡ್ ಮಾಡತಕ್ಕದ್ದು. (ನಮೂನೆಯನ್ನು ಈ ಅಧಿಸೂಚನೆಯಲ್ಲಿ ಅನುಬಂಧಿಸಲಾಗಿದೆ) ತಪ್ಪಿದ್ದಲ್ಲಿ ಕೃಪಾಂಕವನ್ನು ನೀಡಲಾಗುವುದಿಲ್ಲ.
9) ಸಂತ್ರಸ್ಥರ ಕುಟುಂಬದಿಂದ (Land Losers Category) 2002–2007ರ ಅವಧಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ವಜಾಗೊಂಡಿರುವ ಅಭಿಯಂತರರುಗಳಿಗೆ ವಿಧೇಯಕದ ಕಲಂ 7(2) (ಎ) ರನ್ವಯ ಕೃಪಾಂಕಕ್ಕೆ ಅರ್ಹರಿದ್ದು, ಈ ಕೃಪಾಂಕವನ್ನು ಪಡೆಯಲು ಅರ್ಹರಿರುವ ಅಭ್ಯರ್ಥಿಗಳು ಅಧಿಸೂಚನೆಗೆ ಅನುಬಂಧಿಸಲಾದ ಸೇವಾ ಪ್ರಮಾಣ ಪತ್ರವನ್ನು ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರಿಂದ (ನಮೂನೆಯನ್ನು ಈ ಅಧಿಸೂಚನೆಯಲ್ಲಿ ಅನುಬಂಧಿಸಲಾಗಿದೆ)ಹಾಗೂ <u>ಸ್ಥಳಾಂತರ ಕುಟುಂಬಕ್ಕೆ ಸಂಬಂಧಿಸಿದಂತೆ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಯಿಂದ ಪಡೆದು ಈ ಎರಡು ಪ್ರಮಾಣ ಪತ್ರಗಳನ್ನು ಅಪ್‌ಲೋಡ್ ಮಾಡತಕ್ಕದ್ದು. ತಪ್ಪಿದ್ದಲ್ಲಿ ಕೃಪಾಂಕವನ್ನು ನೀಡಲಾಗುವುದಿಲ್ಲ.</u> (ದಿನಾಂಕ 11–02–1999 ರಂದು ಯಾವುದಾದರಕಾರಣಕ್ಕೆ ಸ್ಥಳಾಂತರ ಕುಟುಂಬಕ್ಕೆಸಂಬಂಧಿಸಿದ ಪ್ರಮಾಣ ಪತ್ರವು ಅಭ್ಯರ್ಥಿಗಳು ಪಡೆದಿದ್ದರೇ ಅದೇ **ಮೂಲ** ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದು).

ಸ್ಥಳಾಂತರ ಕುಟುಂಬಕ್ಕೆ ಸಂಬಂಧಿಸಿದಂತೆ ವಿಧೇಯಕದ ಕಲಂ 7(2)(ಬಿ) ರನ್ವಯ ಕೃಪಾಂಕ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಯಿಂದ ಪಡೆದು ಇದನ್ನು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡತಕ್ಕದ್ದು. ತಪ್ಪಿದ್ದಲ್ಲಿ ಕೃಪಾಂಕವನ್ನು ನೀಡಲಾಗುವುದಿಲ್ಲ.

**9.** <u>ವಿಶೇಷ ಸೂಚನೆಗಳು:–</u>

(1) ಈ ನೇಮಕಾತಿಯಲ್ಲಿ ಆಯ್ಕೆ ಹೊಂದಿದವರು ಕಡ್ಡಾಯವಾಗಿ " ಕೃಷ್ಣಾ ಮೇಲ್ದಂಡೆ ಯೋಜನೆ " ವ್ಯಾಪ್ತಿಯಲ್ಲಿ ಕಾರ್ಯಪಾಲಕ ಅಭಿಯಂತರರಾಗಿ ಪದೋನ್ನತಿ ಹೊಂದುವವರೆಗೂ ಕರ್ತವ್ಯವನ್ನು ನಿರ್ವಹಿಸತಕ್ಕದ್ದು(**To work in UKP till promotion to the post of Executive Engineer).**

(2) **ON LINE** ಮೂಲಕ ಅರ್ಜಿ ಸಲ್ಲಿಸುವಾಗ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ಭರ್ತಿ ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡು ನಂತರ ಅದರ ಒಂದು ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಭದ್ರವಾಗಿ ತೆಗೆದಿಟ್ಟುಕೊಂಡಿರತಕ್ಕದ್ದು.

(3) ಈಗಾಗಲೇ ಸೇವೆಯಲ್ಲಿರುವ / ಸೇವೆ ಸಲ್ಲಿಸಿದ ಅಭ್ಯರ್ಥಿಗಳು ಅವರುಗಳ ನೇಮಕಾತಿ ಪ್ರಾಧಿಕಾರಿಗಳಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಅನುಮತಿಯನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ವಿವರಗಳನ್ನು ಅರ್ಜಿಯಲ್ಲಿ ನಮೂದಿಸತಕ್ಕದ್ದು ಮತ್ತು ಇದೇ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಮೂಲ ದಾಖಲಾತಿಯ ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು ತಪ್ಪಿದ್ದಲ್ಲಿ ಅನರ್ಹಗೊಳಿಸಲಾಗುವುದು.

(4) ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕವಾಗುವುದು.

**10.** <u>ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು:</u>

| | | | |
|---|---|---|---|
| ಕೇಂದ್ರ ಕಛೇರಿಯ ಮಾಹಿತಿ ಕೇಂದ್ರ | : | **080–30574957** | **080–30574901** |
| | | **080–22343137** | **080–22343138** |
| | | **080–22343139** | **080–30574910** |
| | | **080–30574946** | **080–30574940** |
| ಪ್ರಾಂತೀಯ ಕಛೇರಿ ಮೈಸೂರು | : | **0821–2545956** | |
| ಪ್ರಾಂತೀಯ ಕಛೇರಿ ಬೆಳಗಾವಿ | : | **0831–2475345** | |
| ಪ್ರಾಂತೀಯ ಕಛೇರಿ ಗುಲ್ಬರ್ಗಾ | : | **08472–227944** | |
| ಪ್ರಾಂತೀಯ ಕಛೇರಿ ಶಿವಮೊಗ್ಗ | : | **08182–228099** | |

**11.** <u>ದುರ್ನಡತೆ:</u>– ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ / ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು / ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಹುದ್ದೆಯ ಸಂದರ್ಶನದಿಂದ / ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.

## ಅನುಬಂಧ–1

## ಅಧಿಸೂಚನೆ ಸಂಖ್ಯೆ ಡಿಪಿಎಆರ್ 31 ಎಸ್ಆರ್ಡಿ 2012 ದಿನಾಂಕ 18–10–2002 ರಂದು ಸಕ್ರಮಗೊಂಡ ಸಹಾಯಕ ಇಂಜಿನಿಯರ್ / ಕಿರಿಯ ಇಂಜಿನಿಯರ್‌ಗಳು ಕರ್ನಾಟಕ ಲೋಕ ಸೇವಾ ಆಯೋಗ ನೇಮಕಾತಿ ಪ್ರಕ್ರಿಯೆಗೆ ಕೃಪಾಂಕ ಅರ್ಹತೆಗಾಗಿ ಸಲ್ಲಿಸಬೇಕಾದ ಸೇವಾ ಪ್ರಮಾಣ ಪತ್ರ

ಶ್ರೀ ......................................................................ಸಹಾಯಕ / ಕಿರಿಯ ಇಂಜಿನಿಯರ್‌ರವರು ಅಧಿಸೂಚನೆ ಸಂಖ್ಯೆ ಡಿಪಿಎಆರ್ 31 ಎಸ್ಆರ್ಡಿ 2002 ದಿನಾಂಕ 18–10–2002ರ ಕ್ರಮ ಸಂಖ್ಯೆ ........................... ರಲ್ಲಿ ಸಹಾಯಕ / ಕಿರಿಯ ಇಂಜಿನಿಯರ್ ಹುದ್ದೆಯಲ್ಲಿ ಸಕ್ರಮಗೊಂಡಿದ್ದು ಪ್ರಸ್ತುತ ......................................... ಹುದ್ದೆಯಲ್ಲಿ ............................. ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಶ್ರೀ ...................................................................... ರವರು ಕೃಪಾಂಕ ಪಡೆಯಲು ಅರ್ಹತೆ ಹೊಂದಿರುತ್ತಾರೆಂದು ದೃಢೀಕರಿಸಲಾಗಿದೆ.

ಬೆಂಗಳೂರು

ದಿನಾಂಕ:

ಸರ್ಕಾರದ ಕಾರ್ಯದರ್ಶಿ ಅಥವಾ ಪ್ರತ್ಯಾಜಿಸಲ್ಪಟ್ಟ ಅಧಿಕಾರಿ,
ಜಲ ಸಂಪನ್ಮೂಲ ಇಲಾಖೆ.

## ಅನುಬಂಧ–2

## ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಜಮೀನು ಕಳೆದುಕೊಂಡ ಬಾಧಿತ ಕುಟುಂಬಗಳಿಗೆ ಸೇರಿದ ಅಭ್ಯರ್ಥಿಗಳು ಗುತ್ತಿಗೆ ಆಧಾರದ ಮೇಲೆ ಸಹಾಯಕ / ಕಿರಿಯ ಇಂಜಿನಿಯರ್ ಹುದ್ದೆಗೆ ನೇಮಕಗೊಂಡು ನಂತರ ಬಿಡುಗಡೆಗೊಳಿಸಲಾದ ಅಭ್ಯರ್ಥಿಗಳು ಸಲ್ಲಿಸಬೇಕಾದ ಸೇವಾ ಪ್ರಮಾಣ ಪತ್ರ

ಶ್ರೀ ..................................................................ಬಿನ್ ........................................................ ರವರು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಜಮೀನು ಕಳೆದುಕೊಂಡ ಬಾಧಿತ ಕುಟುಂಬಗಳಿಗೆ ಸೇರಿದ ಅಭ್ಯರ್ಥಿಗಳಾಗಿದ್ದು, ಇವರು ಜ್ಞಾಪನಾ ಪತ್ರ ಸಂ: ........................................... ದಿನಾಂಕ ..................................................... ರಲ್ಲಿ ಸಹಾಯಕ / ಕಿರಿಯ ಇಂಜಿನಿಯರ್ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಮಾಸಿಕಸಂಚಿತ ವೇತನದಡಿಯಲ್ಲಿ ನೇಮಕಗೊಂಡು ದಿನಾಂಕ ................................. ರಿಂದ .................................... ರವರೆಗೆ ಸೇವೆಯನ್ನು ಸಲ್ಲಿಸಿ, ದಿನಾಂಕ ...................................... ರಂದು ಸೇವೆಯಿಂದ ಬಿಡುಗಡೆ ಹೊಂದಿರುತ್ತಾರೆ.

ಶ್ರೀ ......................................................ಬಿನ್ ......................................................... ರವರು ಜಲ ಸಂಪನ್ಮೂಲ ಇಲಾಖೆಯಲ್ಲಿ .................................. ವರ್ಷ ............. ತಿಂಗಳ ಸೇವೆಯನ್ನು ಸಲ್ಲಿಸಿದ್ದು, ಕರ್ನಾಟಕ ಸಿವಿಲ್ ಸೇವೆಗಳು (ಜಲಸಂಪನ್ಮೂಲ ಸೇವೆ) (ಸಹಾಯಕ ಇಂಜಿನಿಯರುಗಳ ಮತ್ತು ಕಿರಿಯ ಇಂಜಿನಿಯರುಗಳ ವಿಶೇಷ ನೇಮಕಾತಿ) ಅಧಿನಿಯಮ 2013 ರನ್ವಯ ಕೃಪಾಂಕ ಪಡೆಯಲು ಅರ್ಹತೆ ಹೊಂದಿರುತ್ತಾರೆಂದು ದೃಢೀಕರಿಸಲಾಗಿದೆ.

ಬೆಂಗಳೂರು

ದಿನಾಂಕ:

ಮುಖ್ಯ ಇಂಜಿನಿಯರ್,
ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ,ಬೆಂಗಳೂರು.